ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 143-149
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಪ್ರಗತಿಶೀಲ ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳು

**ಎಸ್. ಪಿ. ಅರುಣ**

ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕಡೂರು.

**Abstract:**

*ಪ್ರಗತಿಶೀಲ ಸಾಹಿತ್ಯವು ಸಮಾಜದಲ್ಲಿನ ಅಸಮಾನತೆ, ಶೋಷಣೆ, ಅನ್ಯಾಯ ಹಾಗೂ ಮಾನವೀಯ ಮೌಲ್ಯಗಳ ಕುರಿತು ಚಿಂತನೆಗೆ ಪ್ರೇರಣೆ ನೀಡುವ ಮಹತ್ವದ ಸಾಹಿತ್ಯಿಕ ಚಳವಳಿಯಾಗಿದೆ. ಪ್ರಗತಿಶೀಲ ಸಾಹಿತ್ಯದ ಸಂಶೋಧನೆಯು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಹೊಸ ದೃಷ್ಟಿಕೋನಗಳನ್ನು ಒದಗಿಸುತ್ತದೆ. ಸಮಕಾಲೀನ ಸಾಹಿತ್ಯಿಕ ಪ್ರವೃತ್ತಿಗಳು, ಸ್ತ್ರೀವಾದಿ ಚಿಂತನೆ, ದಲಿತ ಸಾಹಿತ್ಯ ಹಾಗೂ ಅಂಚಿನ ಸಮುದಾಯಗಳ ಅಭಿವ್ಯಕ್ತಿಗಳು ಈ ಸಂಶೋಧನೆಗೆ ಹೊಸ ಸಾಧ್ಯತೆಗಳನ್ನು ತೆರೆದಿಡುತ್ತವೆ. ಆಧುನಿಕ ಸಂಶೋಧನಾ ವಿಧಾನಗಳು ಮತ್ತು ಅಂತರಶಿಸ್ತೀಯ ಅಧ್ಯಯನಗಳ ಮೂಲಕ ಪ್ರಗತಿಶೀಲ ಸಾಹಿತ್ಯದ ವ್ಯಾಪ್ತಿ ಹಾಗೂ ಪ್ರಸ್ತುತತೆಯನ್ನು ಮತ್ತಷ್ಟು ವಿಸ್ತರಿಸಬಹುದು. ಈ ಅಧ್ಯಯನವು ಪ್ರಗತಿಶೀಲ ಸಾಹಿತ್ಯ ಸಂಶೋಧನೆಯಲ್ಲಿನ ಹೊಸ ಆಯಾಮಗಳು, ಸವಾಲುಗಳು ಮತ್ತು ಭವಿಷ್ಯದ ಸಂಶೋಧನಾ ಸಾಧ್ಯತೆಗಳನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ.*

**Keywords:** *ಪ್ರಗತಿಶೀಲ ಸಾಹಿತ್ಯ, ಸಾಹಿತ್ಯ ಸಂಶೋಧನೆ, ಸಾಮಾಜಿಕ ಬದಲಾವಣೆ, ಅಂತರಶಿಸ್ತೀಯ ಅಧ್ಯಯನ, ಹೊಸ ಸಾಧ್ಯತೆಗಳು*

## ಪೀಠಿಕೆ

ಸಾಹಿತ್ಯವೆಂಬುದನ್ನು ಅದರ ಮೂರ್ತ ಸ್ವರೂಪದಲ್ಲಿ ಅನುಭವಿಸಲು ಸಾಧ್ಯವಿಲ್ಲ, ಅದನ್ನು ಕುರಿತಾದ ಆಯಾಮಗಳನ್ನು ವ್ಯಾಖ್ಯಾನಗಳನ್ನು ವಿಶ್ಲೇಷಣೆಗಳ ಮೂಲಕ ಅವಲೋಕಿಸಬಹುದಾಗಿದೆ. ಹಾಗಾಗಿ ಸಾಹಿತ್ಯವೆಂಬುದು ನೆಲವನ್ನು ಸ್ಪರ್ಶಿಸಿದಾಗಲೆಲ್ಲಾ ಅದರ ಚೈತನ್ಯ ವೃದ್ಧಿಯಾಗುತ್ತದೆ, ನೆಲವನ್ನು ಸ್ಪರ್ಶಿಸುವುದೆಂದರೆ ಹಸಿಯಾದ ಮೂಲ ಮಾನವ ಸ್ವಭಾವವನ್ನ ಅರಿತುಕೊಳ್ಳುವುದು, ಅನುಭವಿಸುವುದು, ಮತ್ತು ಮುಕ್ತ ಮನಸ್ಸಿನಿಂದ ಎಲ್ಲಾ ಭಾವನೆಗಳನ್ನು ತನ್ನ ಸಾಹಿತ್ಯ ಕೃತಿಗಳ ಮೂಲಕ ಒಡಮೂಡುವುದಾಗಿದೆ. ಆದ್ದರಿಂದಲೇ ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದ ಮನುಷ್ಯ ತನ್ನ ಬದುಕನ್ನು ಬಹಳ ಸುಂದರವಾಗಿಸಿಕೊಳ್ಳಲು ಅವಕಾಶವಿದೆ, ಜ್ಞಾನ ಸಂಪಾದನೆ ಆಗುತ್ತದೆ ಜೊತೆಗೆ ಜ್ಞಾನದಿಂದ ಮನುಷ್ಯ ತನ್ನ ಜೀವನಮಟ್ಟವನ್ನು, ನೆಲೆಯನ್ನು, ಸ್ವರೂಪವನ್ನು ಬದಲಿಸಿಕೊಳ್ಳಬಹುದು. ಯಾವುದರಿಂದ ತನ್ನ ಬದುಕು ಹಸನಾಗುತ್ತದೆ ಎಂದು ಅನಿಸುತ್ತದೆಯೋ ಅದರತ್ತ ತನ್ನನ್ನು ತಾನು ವಾಲಿಸಿಕೊಳ್ಳಬಹುದು, ಕ್ರಮೇಣವಾಗಿ ತನ್ನಲ್ಲಿರುವ ಕ್ಷುದ್ರತೆ, ಆಲಸ್ಯ ನೀಚತನಗಳನ್ನು ಬಿಟ್ಟು ಆದರ್ಶ ಸಮಾಜದ ಪ್ರಜೆಯಾಗುವ ಮೂಲಕ ಉತ್ತಮ ಸಮಾಜದ

**Please cite this article as:** ಅರುಣ, ಎಸ್. ಪಿ. (2026). ಪ್ರಗತಿಶೀಲ ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 143–149

ನಿರ್ಮಾಣಕ್ಕೆ ಭದ್ರವಾದ ಒಂದು ಅಡಿಗಲ್ಲಾಗಬಹುದು ಹಾಗೂ ಸಾಹಿತ್ಯ ಮನುಷ್ಯನ ಅಭಿರುಚಿಯನ್ನು ತಿದ್ದುತ್ತದೆ, ಬದಲಿಸುತ್ತದೆ, ಹೊಸ ಹೊಸ ಅಭಿರುಚಿಯನ್ನು ಉಂಟುಮಾಡುತ್ತದೆ. ಒಂಟಿ ಬದುಕಿನಿಂದ ಸಾಮೂಹಿಕ ಬಾಳನ್ನ ಕಲಿಸುತ್ತದೆ, ಸ್ವಾರ್ಥದಿಂದ ನಿಸ್ವಾರ್ಥಗಳಿಗೆ ಮನಸ್ಸನ್ನು ಹದಗೊಳಿಸುತ್ತದೆ ಮನುಷ್ಯನ ವಿಚಾರಶಕ್ತಿಯನ್ನು ಹೋಲಿಕೆಯ ಮೂಲಕ ಅನುಭವದ ಮೂಲಕ, ವಿಕಾಸವಾಗುವಂತೆ ಮಾಡಿ ಪ್ರಕೃತಿ ನೀಡಿದ ಸಮೃದ್ಧಿ, ಸಿರಿ ಸಂಪದಗಳನ್ನು ಆನಂದದಿಂದ ಅನುಭವಿಸುವಂತೆ ವಿವೇಕವನ್ನುಂಟು ಮಾಡುತ್ತದೆ. ಆದ್ದರಿಂದಲೇ ನಮ್ಮ ನಿಮ್ಮೆಲ್ಲರ ಓದು ವಿದ್ಯೆ ಜ್ಞಾನ ಸಮರ್ಪಕವಾಗಿ ಹಂಚಿಕೆಯಾಗಿ ಸಾರ್ಥಕವಾಗಬೇಕಾದರೆ ನಾವು ಇಂತಹ ಸಾಹಿತ್ಯವನ್ನು, ಕೃತಿಗಳ ವಿಶೇಷವಾದ ಆಶಯಗಳನ್ನು ಶ್ರದ್ಧಾ ಭಕ್ತಿಗಳಿಂದ ಅಧ್ಯಯನ ಮಾಡಿದಾಗ ಮಾತ್ರ ಸಾಧ್ಯವೆನಿಸುತ್ತದೆ.

ಕನ್ನಡ ಸಾಹಿತ್ಯವನ್ನು ನಾವು ಹಲ್ಮಿಡಿ ಶಾಸನದಿಂದ ಹಿಡಿದು ಇಂದಿನವರೆಗೆ ಬೆಳೆದು ಬಂದಿರುವ ಸಮಗ್ರ ಸಾಹಿತ್ಯವನ್ನು ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯ ಅಥವಾ ಹೊಸಗನ್ನಡ ಸಾಹಿತ್ಯ ಎಂದು ವಿಭಾಗಿಸುತ್ತೇವೆ. ಈ ಪ್ರಾಚೀನ ಕನ್ನಡ ಸಾಹಿತ್ಯ ಸ್ವರೂಪವು ಆಧುನಿಕ ಕನ್ನಡ ಸಾಹಿತ್ಯಕ್ಕಿಂತ ಭಿನ್ನವಾಗಿದೆ, ಆಧುನಿಕ ಪೂರ್ವ ಅಥವಾ ಪ್ರಾಚೀನ ಕನ್ನಡ ಸಾಹಿತ್ಯವು ಧಾರ್ಮಿಕ ಪ್ರಭಾವ ಹಾಗೂ ಸಂಸ್ಕೃತ ಸಾಹಿತ್ಯದ ಪ್ರಭಾವವಾಗಿದೆ. ಆದರೆ ಆಧುನಿಕ ಕನ್ನಡ ಸಾಹಿತ್ಯವು ಈ ಬಗೆಯ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿರುವುದರ ಜೊತೆಗೆ ಹಲವು ವಿಭಿನ್ನ ಮೂಲಗಳಿಂದ ಪ್ರೇರಣೆಗಳಿಗೆ ಒಳಗಾಗಿದೆ ಎಂಬುದನ್ನು ಗಮನಿಸಬೇಕು. ಪಾಶ್ಚಾತ್ಯ ಸಾಹಿತ್ಯ, ವಿಚಾರ ಸರಣಿಗಳಿಂದ ಪ್ರೇರಿತವಾಗಿ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬದಲಾದ ಜೀವನಕ್ರಮ, ಸಾಮಾಜಿಕ ದೃಷ್ಟಿಕೋನಗಳ ಹಿನ್ನೆಲೆಯೊಂದಿಗೆ ತತ್ಕಾಲಿನ ರಾಜಕೀಯ, ಸಾಮಾಜಿಕ ಆರ್ಥಿಕ ಪರಿಸರಗಳ ಹಿನ್ನೆಲೆಯು ಆಧುನಿಕ ಸಾಹಿತ್ಯವನ್ನು ರೂಪಿಸಿದೆ. ಹೀಗಾಗಿ ಒಳ ಹೊರಗಿನ ಒತ್ತಡಗಳು ನಿರ್ಣಾಯಕ ಪಾತ್ರಗಳೆನಿಸಿ ಪ್ರಾಚೀನ ಸಾಹಿತ್ಯದಂತೆ ಆಧ್ಯಾತ್ಮದ ಕಡೆಗೆ ಹೆಚ್ಚು ಒಲವು ತೋರಿಸದೆ, ಮನುಷ್ಯ ಸಂಬಂಧಗಳತ್ತ ಹೆಚ್ಚು ಆಸಕ್ತಿ ತಳೆಯಿತು. ಇಂತಹ ಸಾಹಿತ್ಯ ಕೃತಿಗಳನ್ನ ರಚಿಸಿದ ವಿದ್ವಾಂಸರು, ಅವರ ಕೃತಿಗಳು, ಸಾಹಿತ್ಯಕ ಅಂಶಗಳನ್ನು ಅವಲೋಕಿಸಿ ಸಾಹಿತ್ಯ ಚಳುವಳಿಗಳನ್ನ ಗುರುತಿಸಬಹುದಾಗಿದೆ. ಈ ಆಧುನಿಕ ಕನ್ನಡ ಸಾಹಿತ್ಯ ಲೋಕ ಈ ಶತಮಾನದಲ್ಲಿ ಹಲವಾರು ವೈಚಾರಿಕ ಧೋರಣೆಗಳನ್ನು, ಚಳವಳಿಯ ರೂಪದ ಪಂಥಗಳನ್ನು ಕಂಡಿದೆ. ಅವುಗಳನ್ನು ಅವುಗಳ ಪ್ರವೃತ್ತಿಗಳಿಗನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ ಬಂಡಾಯ ಮತ್ತು ದಲಿತ ಸಾಹಿತ್ಯವೆಂದು ಮುಖ್ಯವಾಗಿ ಗುರುತಿಸುತ್ತೇವೆ.

ಪಾಶ್ಚಾತ್ಯರ ಆಡಳಿತಕ್ರಮ ಮತ್ತು ವ್ಯವಹಾರ ನೀತಿ ಮುದ್ರಣ ಯಂತ್ರಗಳು, ಕ್ರೈಸ್ತ ಮತ ಪ್ರಚಾರ ಮತ್ತು ಹೊಸ ಶಿಕ್ಷಣ ಪದ್ಧತಿ, ವಿಚಾರಧಾರೆಗಳ ಮೂಲಕ ಹೊಸತನ ಮೈದೋರಿ ಭಾರತೀಯರಲ್ಲಿ ಹೊಸ ದಿಗಂತಗಳು ಹೊಸ ಹೊಸ ಅನುಭವಗಳು ಸಂವೇದನೆಗಳು ಸಾಮಾಜಿಕ ಧೋರಣೆಗಳು ಬೆಳೆಯತೊಡಗಿದವು. ಕ್ರಮೇಣವಾಗಿ ಸಾಮ್ರಾಜ್ಯ ಶಾಹಿಗಳಾಗಿದ್ದ ನಮ್ಮ ಸಾಂಸ್ಕೃತಿಕ ಒಡಲೊಳಗೂ ಅಷ್ಟೇ ತಲ್ಲಣಗಳು ಉಂಟಾದವು. ಈ ಮೂಲಕ ಭಾರತೀಯ ಸಮಾಜವನ್ನು ನಮ್ಮದಲ್ಲದ ಸಂಸ್ಕೃತಿ, ಆವಿಷ್ಕಾರ, ಶಿಕ್ಷಣ, ಭಾಷೆ ಆಡಳಿತ ಕ್ರಮ, ಆಲೋಚನಾ ಲಹರಿ ಇನ್ನೂ ಮೊದಲಾದ ಆಧುನಿಕತೆಗಳು, (ಪರಿಕಲ್ಪನೆಗಳು), ನಮ್ಮನ್ನು ಸಾಕಷ್ಟು ಘಾಸಿಗೊಳಿಸುವ (ಇರುಸು–ಮುರುಸು) ಮೂಲಕ ಸಂಸ್ಕೃತೀಕರಣ ಮಾಡಿದವು. ಬದುಕಿನಲ್ಲಿ ಏರುಪೇರುಗಳು ಕಾಣಿಸಿಕೊಂಡವು, ಹಾಗಾಗಿ ಹೊರ ಜಗತ್ತಿನಲ್ಲಾಗುತ್ತಿದ್ದ ಬದಲಾವಣೆಗೆ ಕಣ್ಣು ತೆರೆದ ನಮ್ಮ ಭಾರತೀಯರು, ತಮ್ಮ ಪರಂಪರೆ, ಇತಿಹಾಸ,

ಸಂಸ್ಕೃತಿಗಳ ಕಡೆಗೂ ಮತ್ತೊಮ್ಮೆ ಕಣ್ಣು ಹೊರಳಿಸಿ ಅವುಗಳ ಪುನರಾವಲೋಕನಕ್ಕೆ ತೊಡಗಿದರು. ಈ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ ಮೂಡುತ್ತಿದ್ದ ಎಚ್ಚರವೇ ಸಾಂಸ್ಕೃತಿಕ ಎಚ್ಚರಕ್ಕೂ ಕಾರಣವಾಗಿತ್ತು. ಭಾರತೀಯ ಸಂಪ್ರದಾಯ ಜಡಗಟ್ಟಿದ್ದ ತಮ್ಮ ಮೌಲ್ಯಗಳ ಕಡೆಗೆ ಕಣ್ಣು ಬಿಟ್ಟು ನೋಡಿ, ಅವುಗಳಲ್ಲಿ ಮುಖ್ಯವಾದವುಗಳು ಸತಿ ಸಹಗಮನ ಪದ್ಧತಿ, ವಿಧವಾ ವಿವಾಹ, ಬಾಲ್ಯ ವಿವಾಹ, ಜಾತಿ ಪದ್ಧತಿ, ಮೂಢನಂಬಿಕೆಗಳು ಇನ್ನೂ ಮುಂತಾದ ಅನಿಷ್ಟ ಪದ್ಧತಿಗಳ ವಿರುದ್ಧ ಸಮರ ಸಾರಿದ್ದು ಕ್ರಾಂತಿಕಾರಿಕ ಬದಲಾವಣೆಗಳಿಗೆ ಮುಖಾಮುಖಿಯಾಗಿಸಿದ್ದು ಸರಿಯಷ್ಟೇ. ಇಂತಹ ಕಾಲಘಟ್ಟಗಳಲ್ಲಿ ಒಡಮೂಡಿರುವ ಕೃತಿಗಳನ್ನು, ಪ್ರತಿಭಟನಾ ಮನೋಭಾವವನ್ನು, ಮೌಲ್ಯಗಳನ್ನು ಅವುಗಳ ಆಶಯಗಳನ್ನು, ಪ್ರಸ್ತುತ ಇಂದಿನ ಜಾಗತೀಕರಣದ ವರ್ತಮಾನದಲ್ಲೂ ಅಂತಹ ಮನೋಭಾವವನ್ನು ಮುಂದುವರೆಸುವ ಆ ಸಾಹಿತ್ಯ ಪಂಥಗಳಂತ ಲೇಖಕರು, ಕೃತಿಗಳನ್ನು ರಚಿಸಿದಂತೆಯೇ, ಸಮಾಜಕ್ಕೆ ಎಚ್ಚರಿಕೆಯನ್ನು ನೀಡಿದಂತೆಯೇ ಪ್ರಸ್ತುತವೂ ಅರಿವನ್ನೂ ಸ್ಥಾಪಿಸಬೇಕಾಗಿದೆ. ಸಮಾಜದಲ್ಲಿ ಜರುಗುತ್ತಲಿರುವ ವಿದ್ಯಮಾನಗಳತ್ತ ಕಣ್ಣು ಹೊರಳಿಸಬೇಕಾಗಿದೆ ಮತ್ತು ಪುನರ್ ಸಂಶೋಧನೆಗೆ ಒಳಪಡಿಸಬೇಕಾದ ತುರ್ತು ಅಗತ್ಯವಿದೆ ಎನಿಸುತ್ತದೆ.

ಆಧುನಿಕ ಸಾಹಿತ್ಯ ನಾಲ್ಕು ಕಾಲಘಟ್ಟಗಳಿಗೂ ಸಾಮಾನ್ಯವಾದ ಒಂದು ಸಂಗತಿ ಎಂದರೆ ಇವುಗಳು ತಮ್ಮ ಸಾಂಸ್ಕೃತಿಕ ಇತಿಹಾಸದ ಅವಿಭಾಜ್ಯ ಅಂಗವಾಗಿದ್ದು, ವಿಭಿನ್ನ ಪ್ರಮಾಣದಲ್ಲಿ ಅವು ತಮ್ಮ ಮುಖ್ಯ ಪ್ರೇರಣೆಯನ್ನು ಪಶ್ಚಿಮದಿಂದ ಪಡೆದುಕೊಂಡಿವೆ ಎನ್ನಬಹುದು. ಹಾಗಾಗಿಯೂ ನವೋದಯ ಸಾಹಿತ್ಯವೂ ಸಹ, ಪ್ರಾಚೀನ ಕನ್ನಡ ಸಾಹಿತ್ಯದಂತೆ ಆಧ್ಯಾತ್ಮದ ಸುತ್ತ ಅಷ್ಟೇ ಸುತ್ತುತ್ತದೆ ಮತ್ತು ಮನುಷ್ಯನಲ್ಲಿ ಆಸಕ್ತಿಯನ್ನು ತಳೆಯುತ್ತದೆ ಇದರಿಂದಾಗಿ ಮನುಷ್ಯ ಸಂಬಂಧ, ನಿಸರ್ಗದಲ್ಲಿ ಆಸಕ್ತಿ, ಸ್ತರಗಳ ಮನುಷ್ಯ ಜೀವನದ ಬಗ್ಗೆ ಒಲವು, ಜೀವನಕ್ಕೆ ವೈಯಕ್ತಿಕ ಪ್ರತಿಕ್ರಿಯೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಹತ್ವ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿತು. ಈ ಕಾಲಘಟ್ಟದ ಲೇಖಕರು ನಿಸರ್ಗ ಪ್ರೀತಿ, ಮತ್ತು ಪ್ರಕೃತಿಯೇ ಸಜೀವ ಪಾತ್ರಗಳೆನ್ನುವಂತೆ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ನವೋದಯದ ಹಿನ್ನೆಲೆಯಲ್ಲಿ ದುಡಿದ ರಾಷ್ಟ್ರೀಯತೆ, ಇಂಗ್ಲಿಷ್ ರೋಮ್ಯಾಂಟಿಕ್ ಸಾಹಿತ್ಯದ ಪ್ರೇರಣೆ, ಹಿಂದೂ ಪುನರುತ್ಥಾನದ ಹಂಬಲ ಮೊದಲಾದ ಅಂಶಗಳೆಲ್ಲವೂ ನಮ್ಮ ಸಾಹಿತ್ಯಕ್ಕೆ ವಿಶೇಷ ಸತ್ವವನ್ನು ನೀಡಿವೆ. ಇಲ್ಲಿ ಕಥೆ, ಕಾದಂಬರಿ ನಾಟಕ ಮತ್ತು ಕಾವ್ಯಗಳ ಬೆಳವಣಿಗೆಯನ್ನು ಪ್ರತ್ಯೇಕವಾಗಿಯೇ ಪರಿಶೀಲಿಸಬೇಕಾಗಿದೆ.

ಆದರ್ಶಪರ, ಆತ್ಮ ಸಂತೃಪ್ತಿಯ ನಿಲುವಿನ ವಿರುದ್ಧ ಸಮರ ಸಾರಿದವರು ಈ ಪ್ರಗತಿಶೀಲರು.ಈ ಕಾಲದ ಸಾಹಿತ್ಯ ಕೃತಿಗಳಲ್ಲಿ ಕಾಣುವ ಒಟ್ಟು ಮನೋ ಧರ್ಮವನ್ನು ಗ್ರಹಿಸಿದ ಮೇಲೆ ವಿಮರ್ಶಕರು ಆ ಲೇಖಕರಿಗೆ ಕೊಟ್ಟ ಹೆಸರದು. "ಜನತೆಯ ಮನೋವಿಕಾಸಕ್ಕೆ ಸಾಹಿತ್ಯ ಸಾಧನವೆಂಬ ಭಾವನೆ ಬೆಳಗಲು ಪ್ರಯತ್ನ ಸಾಕಷ್ಟು ಆಗಿಲ್ಲ, ಸಾಹಿತಿ ತನ್ನ ಸುವರ್ಣ ಮಂದಿರದಿಂದ ಹೊರಬೀಳಲೊಲ್ಲ, ಸಾಮಾನ್ಯವಾಗಿ ತನ್ನ ಹೊಟ್ಟೆಯ ಹೋರಾಟದಲ್ಲಿ ಸಾಹಿತ್ಯಕ್ಕೆ ಗಮನ ಕೊಡಲೊಲ್ಲ. ಸಾಹಿತ್ಯವೆಂಬ ಈ ಮಡಿ ಕೋಟೆಯನ್ನ ಕಟ್ಟಿಕೊಂಡು ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವ ಪ್ರಪಂಚದಲ್ಲಿ ಮೈಮರೆಯುವ ಸಾಹಿತ್ಯ ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ" ಎನ್ನುತ್ತಲೇ, ಎಲ್ಲಾ ಸಾಹಿತ್ಯ ಕಲೆಗಳ ಉಗಮಕ್ಕೂ ಸಾಮಾನ್ಯ ಜನತೆಯೇ ಮೂಲ. ಉತ್ತಮ ಕಲೆಯ ತಾಯಿಬೇರು ಸಾಮಾನ್ಯರ ಜೀವನದಲ್ಲಿ ಅಡಗಿದೆ ಎಂದರು. ನವೋದಯ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಪದರೊಂದಿಗೆ ಪೂರ್ಣ ಬೆರೆಯುವ ಮನೋಭಾವನೆ ಇರಲಿಲ್ಲ, ಆದ್ದರಿಂದಲೇ ಅತೃಪ್ತಿ ಹುಟ್ಟಿತು, ನವೋದಯ ಕಾಲದ ಕವಿಗಳು

ನಿರ್ವೀರ್ಣ್ಯರಾಗಿ ಕುಳಿತಾಗ ಪ್ರಗತಿಶೀಲರು ಜನಕ್ಕೆ ಧೈರ್ಯ, ಸ್ಥೈರ್ಯಗಳನ್ನ ಮತ್ತು ಬದುಕಿನಲ್ಲಿ ಹೊಸ ಭಾವನೆಗಳು ಮೂಡುವಂತೆ ಕೃತಿಗಳ ರಚನೆ ಮಾಡಿದರು.

ಲೇಖಕ ಕ್ರಾಂತಿಕಾರಿಯಾಗಿರಬೇಕೆಂದು ಬಯಸಿದ ಮೇಲೆ ಇವರಿಗೆ ರಷ್ಯನ್ ಕ್ರಾಂತಿಯೂ, ಕಮ್ಯುನಿಸ್ಟ್ ಸಾಹಿತ್ಯದ ಪ್ರೇರಣೆಯ ಜೊತೆಗೆ ತಮ್ಮ ಕಥೆ, ಕವಿತೆ, ಕಾದಂಬರಿ, ಪ್ರಬಂಧ, ಭಾಷಣಗಳ ಮೂಲಕ ಜನತೆಗೆ ಅದರ ಅಮೃತತ್ವವನ್ನು ಕಣ್ಣು ಬಿಟ್ಟು ನೋಡುವ ನಿಷ್ಠೆಯೂ ಎದುರುವ ಕೆಚ್ಚು ಕಂಡು ಬಂದವು. ಜೊತೆಯಲ್ಲಿ ಹಳೆಯ ತತ್ವಗಳು ಪರಂಪರಾಗತ ಮೌಲ್ಯಗಳನ್ನು ಸಾಮಾಜಿಕ ಅನಿಷ್ಠಗಳನ್ನು, ರಾಜಕೀಯ ಪಲ್ಲಟಗಳನ್ನು ಕುರಿತಂತೆ ಪ್ರಶ್ನಿಸಿದ ಈ ಪ್ರಗತಿಶೀಲರು, ಶಾಂತಿ ದುರ್ಬಲತೆಯಿಂದ ದೊರೆಯುವುದಿಲ್ಲ, ಕ್ರಾಂತಿ ಆದ ನಂತರವೇ ಶಾಂತಿ ಸಾಧ್ಯ ಎಂದರು. ಸಾಹಿತ್ಯ ವಿಲಾಸದ ಸಾಧನವಲ್ಲ, ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ, ಸಮಾಜೋದ್ಧಾರಕ್ಕೆ, ಸಾಧನವಾಗಿರುವ ಗಾಯಿತ್ರಿ ಅದು. ಸಾಹಿತಿ ತನ್ನ ಸುಪ್ತ ಚೇತನದ ಅರಿವನ್ನುಂಟು ಮಾಡಿಕೊಂಡು ಅವನ ಕ್ರಾಂತಿ ಖಡ್ಗಕ್ಕೆ ಲೋಕದ ತಾಮಸ ಕಳೆಗಳು ನಡುಗಬೇಕು, ಅದು ದುರ್ಬಲರ ದಲಿತರ, ಬಡವರ, ಶೋಷಿತರ ರಕ್ಷಾ ಕವಚವಾಗಬೇಕೆಂದರು. ಆಗಲೇ ಸಾಹಿತ್ಯದ ಸಾರ್ಥಕ್ಯ ಸಾಹಿತಿಯ ಜನ್ಮಸಾಫಲ್ಯ ಎಂದರು.

ಹಾಗಾಗಿ ಪ್ರಗತಿಶೀಲ ಸಾಹಿತ್ಯ ಪಶ್ಚಿಮ ಮತ್ತು ದೇಶಿಯ ತಾತ್ವಿಕ ಸಂವೇದನೆಯ ಹಿನ್ನೆಲೆಯಲ್ಲಿ ರೂಪಿತವಾದ ಒಂದು ಸಾಹಿತ್ಯ ಪಂಥವಾಗಿದ್ದು ಮಾರ್ಕ್ಸ್‌ವಾದ ಗಾಂಧಿವಾದ, ವಚನಾಕಾರರ ಸಾಮಾಜಿಕ ಭದ್ರತೆ, ಕೀರ್ತನಾಕಾರರ ಸಾಮಾಜಿಕ ಕಳಕಳಿ, ಸರ್ವಜ್ಞನ ನಿಷ್ಠೂರ ವಾಸ್ತವ ಪ್ರಜ್ಞೆ, ನವೋದಯದವರ ಮಾನವೀಯತೆ, ಮತ್ತು ವಾಸ್ತವ ಪ್ರಜ್ಞೆ ಹಾಗೂ ಮಾರ್ಕ್ಸ್ ವಾದದ ತಾತ್ವಿಕ ಚಿಂತನೆಯ ಬೆಳಕಿನಲ್ಲಿ ಒಡಮೂಡಿ ಬಂದ ಒಂದು ಪ್ರಮುಖ ಸಾಹಿತ್ಯ ಚಳವಳಿಯಾಗಿ ಗಮನ ಪಡೆದುಕೊಂಡಿದೆ. ಆದ್ದರಿಂದಲೇ ಇಂತಹ ಪ್ರಗತಿಪರರು ಸೇರಿ ಕಟ್ಟಿದ ಈ ಪಂಥವನ್ನು ಮರು ವ್ಯಾಖ್ಯಾನ ಮಾಡುವ ಅನಿವಾರ್ಯತೆ ಬಂದೊದಗಿದೆ. ಮೂಲಕ ಇಂದಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಇಡೀ ಸಮಾಜದ ಜನಜೀವನವೇ ಬದಲಾವಣೆಗೆ ಒಳಗಾಗಿದೆ, ಸಾಮಾಜಿಕ ಅಸಮಾನತೆ, ರಾಜಕೀಯ ಪಲ್ಲಟಗಳು, ಆರ್ಥಿಕ ಸ್ಥಿತ್ಯಂತರಗಳು, ಮತ್ತು ಆಧುನಿಕ ಉಪಕರಣಗಳೊಂದಿಗೆ ಬದುಕನ್ನ, ಗೊತ್ತಿದ್ದೂ ಗೊತ್ತಿಲ್ಲದೆಯೋ ವಾಸ್ತವ ಎಂಬಂತೆ ರೂಪಿಸಿಕೊಳ್ಳತೊಡಗಿರುತ್ತೇವೆ. ಹಾಗಾಗಿ ಸಾಮಾಜಿಕ ಸಂಬಂಧಗಳಲ್ಲಿ ಒಲವಿಲ್ಲದ್ದು, ಇಡೀ ಜೀವನ ವಿಧಾನವನ್ನೇ ಕ್ಷಣಿಕವೆಂಬಂತೆ ಬಿಂಬಿಸಿಕೊಂಡಿದ್ದೇವೆ, ಇದನ್ನು ಸಂಪೂರ್ಣ ಅವೈಜ್ಞಾನಿಕ ಎನ್ನಲಾರದೆ ಅನಿವಾರ್ಯವಾದ ಸ್ಥಿತಿಯಾಗಿದೆ ಎಂದು ನಂಬಬೇಕಾಗಿದೆ. ಹಾಗಾಗಿ ಇಂತಹ ಸುಸಂದರ್ಭದಲ್ಲಿ ಪ್ರಗತಿಶೀಲರು ಮಾಡಿದ ಪ್ರಯೋಗಗಳನ್ನು ನಾವು ಪ್ರಸ್ತುತ ಸಂದರ್ಭದಲ್ಲಿ ಸಂಶೋಧನೆಗೆ ಒಳಮಾಡಿ ಭದ್ರ ಸಮಾಜದ ಅಡಿಗಲ್ಲನ್ನು ಮತ್ತೊಮ್ಮೆ ಹಾಕಬೇಕಿದೆ ಎನಿಸುತ್ತದೆ.

ಇಂಥಹ ಪ್ರಗತಿಶೀಲ ಸಾಹಿತ್ಯದಲ್ಲಿ ಒಡಮೂಡಿ ಬಂದ ಸಾಹಿತ್ಯ ಕೃತಿಗಳನ್ನು, ಅದರ ಲೇಖಕರನ್ನು, ನೆನೆಯುವ ಅನಿವಾರ್ಯ ಅವಕಾಶ ಬಂದು ಒದಗಿದೆ. ಅಂದಿನ ಅ.ನ.ಕೃ, ನಿರಂಜನ, ಬಸವರಾಜ ಕಟ್ಟೀಮನಿ, ತ.ರಾ.ಸು, ಎಂ. ಇನಾಂದಾರ್, ಕುಮಾರ್ ವೆಂಕಣ್ಣ, ಅರ್ಚಕ ವೆಂಕಟೇಶ್, ಕೃಷ್ಣಕುಮಾರ್ ಕಲ್ಲೂರ್, ಚದುರಂಗ, ಎಸ್ ಅನಂತನಾರಾಯಣ, ಭಾರತೀ ಪ್ರಿಯರಂತಹ ಲೇಖಕರು ತಮ್ಮ ಕೃತಿಗಳ ಮೂಲಕ ಸಾಮಾಜಿಕ ಅನ್ಯಾಯ, ಅಸಮಾನತೆ, ಲಿಂಗಭೇದ, ಜಾತಿಭೇದ, ಸ್ತ್ರೀಶೋಷಣೆ, ಬದುಕಿನ ಕಟು ವಾಸ್ತವತೆ, ಶ್ರೀಮಂತ–ಬಡವ, ಮಾಲೀಕ–ಕಾರ್ಮಿಕರ ನಡುವಿನ ಬಿರುಕು, ಶೋಷಿತರ ನೋವು–ನಲಿವು, ಭವ್ಯವೆಂದು ಕರೆಯಲ್ಪಡುವ ನಮ್ಮ ಸಂಸ್ಕೃತಿಯ ಹಿಂದಿನ ಕರಾಳ

ಮುಖ, ರಾಜಕೀಯ, ಕಾಮ–ಪ್ರೇಮ, ಕುಟುಂಬ–ಸಮಾಜ, ಮತಮಾನ್ಯಗಳ ಒಳಗೆ ನಡೆಯುವ ಶೋಷಣೆ, ಅನಾಚಾರಗಳು ಇನ್ನೂ ಮುಂತಾದ ಪ್ರಮುಖ ಸಮಸ್ಯೆಗಳ ಮೇಲೆ ಕನ್ನಡಿಹಿಡಿಯುವ ಮತ್ತು ಸೃಜನಾತ್ಮಕ ಸ್ಥಳದಲ್ಲಿ ಅದನ್ನು ಬಿಡಿಸಿ ತೋರಿಸುವ, ಪ್ರಶ್ನಿಸುವ ದಿಟ್ಟ ಪ್ರಯತ್ನವನ್ನು ಈ ಅವಧಿಯಲ್ಲಿ ಲೇಖಕರು ಮಾಡಿದರು.

ಕಾದಂಬರಿ ಸಾರ್ವಭೌಮರೆಂದು ಪರಿಚಿತರಾದ ಅ.ನ.ಕೃಷ್ಣರಾಯರು, ಕನ್ನಡ ನಾಡು – ನುಡಿ ಸಂಸ್ಕೃತಿಗೆ ನೀಡಿದ ಕೊಡುಗೆ ಅಪಾರ, ಅವರ ಪ್ರಮುಖ ಕಾದಂಬರಿಗಳಾದ ನಗ್ನ ಸತ್ಯ, ಶನಿ ಸಂತಾನ, ಮಣ್ಣಿನ ಮಗ, ಅಗ್ನಿ ಕನ್ಯೆ, ಮುಗಿಯದ ಕಥೆ, ಕಾದಂಬರಿಗಳ ಮೂಲಕ ಜಾತೀಯತೆ ಹಸಿವು ಶೋಷಣೆಗಳಂಥ ಸ್ಫೋಟಕ ವಸ್ತುಗಳನ್ನು ಕುರಿತು ಬರೆದರು. ಅಲ್ಲದೆ ಹೆಣ್ಣಿನ ನಿಸ್ವಾರ್ಥ ತ್ಯಾಗ, ತಾಯಿಯ ಕರುಳಿಗಿಂತ ಕಣ್ಣೀರು ತರಿಸುವಂತಹ ಸಾಂಪ್ರದಾಯಿಕ ವಿಷಯಗಳನ್ನು ಕುರಿತು ತಮ್ಮ ಕೃತಿಗಳಲ್ಲಿ ಪ್ರಕಟಿಸಿದರು. ನಿರಂಜನ ರವರು ಅಪ್ಪಟ ಮಾರ್ಕ್ಸ್‌ವಾದಿಯಾಗಿದ್ದು ಸೃಜನಶೀಲ ಬರಹಗಾರರಾಗಿದ್ದರು. ಸ್ವಾಮಿ ಅಪರಂಪರ, ವಿಮೋಚನೆ, ರಂಗಮ್ಮನ ವಠಾರ, ಅಭಯ, ನಂದಗೋಕುಲ, ಬನಶಂಕರಿ, ಮುಂತಾದ ಕಾದಂಬರಿಗಳಲ್ಲಿ ಇತಿಹಾಸ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಕೃತಿಗಳಲ್ಲಿ ರಚಿಸಿದ್ದಾರೆ.

ಪ್ರಗತಿಶೀಲರ ಕಥೆಗಳಲ್ಲಿ ಅದುವರೆಗೆ ಚರ್ಚಿತವಾಗದ ನಗರ ಜೀವನದ ಸಮಸ್ಯೆಗಳನ್ನು ಗುರುತಿಸತೊಡಗಿದರು. ಕಾರ್ಮಿಕರು, ವಲಸಿಗರು, ವೇಶ್ಯೆಯರು ಕೆಲವೊಮ್ಮೆ ತಾವು ಇರುವ ಹಾಗೆ ಸಾಮಾಜಿಕ ಸಮಸ್ಯೆಗಳನ್ನು ಮುನ್ನಲೆಗೆ ತಂದರು. ಭಾಷೆಯ ಬಳಕೆ ಇನ್ನಷ್ಟು ಆದುನಿಕವೂ ವೇಗಶೀಲವೂ ಆಯಿತೆಂಬಂತೆ ತೋರುತ್ತದೆ. ಕಥೆಯ ಪಾತ್ರಗಳು ವೈಯಕ್ತಿಕ ಉನ್ನತಿಗಿಂತ ಸಾಮೂದಾಯಿಕ ಪ್ರಾತಿನಿದೀಕರಣಕ್ಕೆ ಒತ್ತು ಕೊಟ್ಟವು. ಅವುಗಳಲ್ಲಿ ಪ್ರಮುಖವಾಗಿ ಚಿರಸ್ಮರಣೆ ಮತ್ತು ಮೃತ್ಯುಂಜಯ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷ ಅಥವಾ ಕ್ರಾಂತಿತ್ವ ಬೆನ್ನೆಲುಬು ಆಗಿರುವುದನ್ನು ಕಾಣಬಹುದಾಗಿದೆ. ಪ್ರಗತಿಶೀಲರ ಕಥೆಗಳಲ್ಲಿ ಅದುವರೆಗೂ ಚರ್ಚಿತವಾಗಿರುವ ನಗರ ಜೀವನದ ಸಮಸ್ಯೆಗಳನ್ನು ಗುರುತಿಸತೊಡಗಿದರು. ಕಾರ್ಮಿಕರು ವಲಸಿಗರು ವೇಶ್ಯೆಯರು ಕೆಲವೊಮ್ಮೆ ಆದರ್ಶೀಕರಣದ ದಟ್ಟ ಪರಿವೇಶದಲ್ಲಿ ಕೆಲವೊಮ್ಮೆ ತಾವು ಇರುವ ಹಾಗೆ ಮುನ್ನಡೆಗೆ ತಂದರು. ಭಾಷೆಯ ಬಳಕೆಯು ಇನ್ನಷ್ಟು ಆಧುನಿಕವು ವೇಗಶೀಲವು ಆಯ್ತೆಂದು ತೋರುತ್ತದೆ.

ಪ್ರಗತಿಶೀಲ ಚಳುವಳಿಯ ಕೆಲವು ಅಂಶಗಳು, ಲಕ್ಷಣಗಳು, ವಾಸ್ತವವಾಗಿ ಅವರು ತರ ಬಯಸಿದ ಸಿದ್ಧಾಂತಗಳು ಅದರ ಅಲ್ಪಾಯುಷ್ಯಕ್ಕೆ ಕಾರಣವಾಯಿತು ಎನ್ನಬಹುದು. 1. ಇದೊಂದು ಖಚಿತವಾದ ಅಂಗ ರಚನೆಯುಳ್ಳ ಚಳವಳಿಯಾಗಿ ಪ್ರಾರಂಭವಾದರೂ, ತನ್ನ ಜೊತೆ ಜೊತೆಯಾಗಿ ಹೆಜ್ಜೆ ಹಾಕಿ ರಕ್ತದಾನ ಮಾಡಬಲ್ಲ ಸಾಮಾಜಿಕ, ರಾಜಕೀಯ ಚಳುವಳಿಗಳ ಸಾಂಗತ್ಯ ಪಡೆದಿರಲಿಲ್ಲ. 2. ಪ್ರಗತಿಶೀಲ ಚಳುವಳಿಯ ಕಾಳಜಿಗಳ ಕೇಂದ್ರವು ಶ್ರಮಿಕ ವರ್ಗಗಳಾದರೂ ಅದರಲ್ಲಿ ತೊಡಗಿಸಿಕೊಂಡ ಲೇಖಕರು ಮಧ್ಯಮ ವರ್ಗದವರೇ ಆಗಿದ್ದರು. ಆದರೆ ಉನ್ನತ ಶಿಕ್ಷಣ ಪಡೆದವರು ಆಗರ್ಭ ಶ್ರೀಮಂತರು ಆಗಿರಲಿಲ್ಲ, ಹಾಗಾಗಿ ತಾವು ಚಿತ್ರಿಸಬಯಸುವ ಜೀವನ ಕ್ರಮದ ಸರಿಯಾದ ಗ್ರಹಿಕೆ ಅವರಿಗೆ ಇರಲಿಲ್ಲವೆನ್ನಬಹುದು, ಆದ್ದರಿಂದ ಒಟ್ಟು ಸಮುದಾಯವನ್ನು ಚಳುವಳಿಯ ಅಥವಾ ತಮ್ಮ ಬರವಣಿಗೆಗೆ ವ್ಯಾಪ್ತಿಯಲ್ಲಿ ತಂದುಕೊಳ್ಳಲು ಕಷ್ಟ ಸಾಧ್ಯವಾಯಿತು. 3. ಬೌದ್ಧಿಕತೆಗಿಂತ ಹೆಚ್ಚಾಗಿ ಬಾವುಕತೆಯಿಂದ ನಿಯಂತ್ರಿತವಾಗಿದ್ದು. 4. ಸಾಮಾಜಿಕ ಸಮಸ್ಯೆಗಳನ್ನ ಕುರಿತ ಸ್ಥೂಲವಾದ ಕಳಕಳಿಯಿಂದಾಗಿ ಒಂದೇ ಚಳವಳಿಯ ಒಳಗಡೆ ತರಬಹುದೆಂಬ ತಪ್ಪು ತಿಳುವಳಿಕೆಯಿಂದಾಗಿ ಸೌಮ್ಯವಾದ, ಸಮತಾವಾದ, ಗಾಂಧಿವಾದಗಳಂತಹ ವಿಭಿನ್ನ ನಿಲುವುಗಳು ಅಸಾಧ್ಯವಾಗಿ ಪ್ರಗತಿಶೀಲ

ಚಳುವಳಿ ಹಿನ್ನಡೆ ಅನುಭವಿಸುವಂಥಾಯಿತು ಎನ್ನಬಹುದು.

ಪ್ರಗತಿಶೀಲ ಸಾಹಿತ್ಯವನ್ನು ಓರೆಗೆ ಹಚ್ಚುವಾಗ ಸಾಹಿತ್ಯದಿಂದ ನಾವು ಏನನ್ನು ನಿರೀಕ್ಷಿಸುತ್ತೇವೆ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಪ್ರಗತಿಶೀಲ ಲೇಖಕರೆಲ್ಲಾ ಸಾಕಷ್ಟು ಜನಪ್ರಿಯ ಗಳಿಸಿದರು. ಈ ಜನಪ್ರಿಯತೆಯೇ ಒಂದು ರೀತಿಯಲ್ಲಿ ಅವರಿಗೂ, ಕನ್ನಡ ಸಾಹಿತ್ಯಕ್ಕೂ ಅಪಕಾರವಾಯಿತೆನ್ನಬಹುದು. ವಸ್ತು, ಧೋರಣೆ, ಆಶಯ ಇವೆ ಸಾಕಷ್ಟು ಸಾಹಿತ್ಯ ಕೃತಿಯ ಮೌಲ್ಯವನ್ನು ನಿರ್ಧರಿಸುವುದಿಲ್ಲ, ಪ್ರಪಂಚದಲ್ಲಿ ಅನ್ಯಾಯವಾಗುತ್ತಿದೆ, ದುಷ್ಟರು, ಆಷಾಢಭೂತಿಗಳು ಇತರನ್ನು ಶೋಷಿಸುವರು ವಿಜೃಂಭಿಸುತ್ತಿದ್ದಾರೆ, ಹೆಂಗಸರನ್ನು ಗಂಡಸರು ಮತ್ತೆ ಮತ್ತೆ ಭೋಗದ ವಸ್ತುವಾಗಿ ನೋಡುತ್ತಿದ್ದಾರೆ. ಶಿವರಾಮ ಕಾರಂತರ 'ಚೋಮನದುಡಿ', ಯು.ಆರ್.ಅನಂತಮೂರ್ತಿಯವರ 'ಭಾರತೀಪುರ' ಇನ್ನೂ ಮುಂತಾದ ಕೃತಿಗಳು ಇಂತಹ ಕೆಲಸಗಳನ್ನು ಸಾಧಿಸಿವೆ ಎನ್ನಬಹುದು. ಪ್ರಗತಿಶೀಲ ಪಂಥದಲ್ಲಿ ಒಬ್ಬರಾದ ನಿರಂಜನರ 'ಕೊನೆಯ ಗಿರಾಕಿ' ಸಣ್ಣ ಕಥೆಯಲ್ಲಿ ಸಾಧಿಸಿದ್ದನ್ನೇ ಒಟ್ಟಿನಲ್ಲಿ ಪ್ರಗತಿಶೀಲ ಸಾಹಿತ್ಯ ಸಾಧಿಸಲಾರದೆ ಹೋಯಿತೆನ್ನಬಹುದು. ಧರ್ಮದಲ್ಲಿನ ಅಸ್ಪೃಶ್ಯತೆಯ ಅನ್ಯಾಯ, ಮಾನವ ಧರ್ಮಕ್ಕೆ ಮಾನವ ವಿರೋಧ ಎಂದು ಸಾಹಿತ್ಯ ಕೃತಿಯೊಂದು ಹೇಳಿದರೆ ಸಾಲದು, ಅಸ್ಪೃಶ್ಯತೆಗೆ ಒಳಗಾದ ವ್ಯಕ್ತಿಗೆ, ಸಮಾಜಕ್ಕೆ ಪ್ರತಿಯಾಗಿ ಹೇಗೆ ಪ್ರತಿಕ್ರಿಯಿಸಿದೆ, ಏನು ಮಾಡುತ್ತಿದೆ ಎನ್ನುವುದನ್ನು ಹೇಳುವಾಗ ಅಸ್ಪೃಶ್ಯತನದ ಅನುಭವವನ್ನೇ ನಮ್ಮದಾಗಿಸಿಕೊಳ್ಳಬೇಕಾಗುತ್ತದೆ. ಅನುಭವ ಕೃತಿಯಲ್ಲಿ ವ್ಯವಸ್ಥೆಗೊಂಡು ಭಾಷೆಯ ಮೂಲಕ ಸಂವಹನ ಸಾಧಿಸಬೇಕು. ಪ್ರಗತಿಶೀಲ ಸಾಹಿತ್ಯದಲ್ಲಿ ಬಹುಪಾಲು ಭಾಷೆ ಅನುಭವದ ಅನಿವಾರ್ಯ ರೂಪವಾಗಿ ಒಡಮೂಡಲಿಲ್ಲವೆನ್ನಬಹುದು. ಆವೇಶ, ಭಾವಾತಿರೇಕ, ದೀರ್ಘ ಪರಿಣಾಮ ಬೀರುವ ತವಕ ಇವುಗಳಿಂದಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ಕೆಲವು ಸಲ ಪ್ರಗತಿಶೀಲ ಸಾಹಿತ್ಯದ ಲೇಖಕರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದುವರೆಗೆ ಕಾಣದಿದ್ದ ಹೊಸ ಕೇಂದ್ರ ಭಾವವೊಂದನ್ನು ತೆರೆದು ಕೊಟ್ಟರು. ರೋಷ, ಸುತ್ತಮುತ್ತಲಿನ ಸಮಾಜದ ಕೊಳೆಯನ್ನು ತೊಡೆದುಹಾಕುವ ಛಲದಿಂದ ಬರೆದ ಪ್ರಗತಿಶೀಲರು ಸಮಾಜದಲ್ಲಿನ ಮೇಲ್ಸ್ತರದಲ್ಲಿರುವ ವ್ಯಕ್ತಿಗಳು ಬಚ್ಚಿಡುವ ವಿಷಯಗಳನ್ನು ಆರಿಸಿ ಬರೆದರು, ಆಷಾಡಭೂತಿ ತನವನ್ನು ಬಯಲಿಗೆಳೆಯಲು ಬರೆದರು, ಮಠಗಳಲ್ಲಿ, ದೇವಾಲಯಗಳಲ್ಲಿ, ಮನೆಗಳಲ್ಲಿ ನಡೆಯುವ ಮೋಸ – ದುರಾಚಾರಗಳನ್ನು ಬಯಲಿಗೆಳೆಯುವ ಮೂಲಕ ಕೃತಿಗಳಲ್ಲಿ ಒಡಮೂಡಿಸಿದರು, ಮಠಗಳಲ್ಲಿ, ಕಾರ್ಖಾನೆಗಳಲ್ಲಿ ನಡೆಯುವ ಶೋಷಣೆಗಳನ್ನು, ಕೃತಿಗಳ ವಸ್ತುವಾಗಿಸಿ ಅಂತಹ ಕುಕೃತ್ಯಗಳನ್ನು ಬಯಲಿಗೆಳೆಯಲು ಬರೆದರು. ಇಂದಿನ ಪ್ರಸ್ತುತ ಸಮಾಜದಲ್ಲಿಯೂ ಇಂತಹ ಪ್ರಗತಿಶೀಲರು ಮಾಡಿದ ಪ್ರಯತ್ನಗಳನ್ನು ಸಂಶೋಧಿಸುವ ಮೂಲಕ ಹೊಸ ಸಾಧ್ಯತೆಗಳಿವೆ ಇಂದಿನ ತಂತ್ರಜ್ಞಾನ ಯುಗದಲ್ಲಿ ಇಡೀ ಸಾಮಾಜಿಕ ಜನಜೀವನವೇ ಬೆರಳ ತುದಿಯಲ್ಲಿ ಅಡಗತೊಡಗಿದೆ.

ಪ್ರಗತಿಶೀಲ ಕಾಲದ ಅಪರೂಪದ ಕಾದಂಬರಿಗಳು ಮತ್ತು ಸಣ್ಣಕಥೆಗಳನ್ನು ಡಿಜಿಟಲ್ ರೂಪಕ್ಕೆ ತಂದು ಬಾಹ್ಯ ತಂತ್ರಜ್ಞಾನದ ಸಹಾಯದಿಂದ ಶಬ್ದಕೋಶ ಮತ್ತು ವಿಷಯಾಧಾರಿತ ವಿಶ್ಲೇಷಣೆ ನಡೆಸಬಹುದು.

ಮಾರ್ಕ್ಸ್‌ವಾದದಿಂದ ಪ್ರೇರಿತವಾದ ಬಂಗಾಳಿ, ಮಲೆಯಾಳಂ ಅಥವಾ ಹಿಂದಿ ಪ್ರಗತಿಶೀಲ ಸಾಹಿತ್ಯಕ್ಕೂ ಮತ್ತು ಕನ್ನಡ ಪ್ರಗತಿಶೀಲ ಸಾಹಿತ್ಯಕ್ಕೂ ಇರುವ ಸಾಮ್ಯತೆ ಹಾಗೂ ತೌಲನಿಕ ಅಧ್ಯಯನಕ್ಕೆ ಅವಕಾಶಗಳಿವೆ. ಬಂಡವಾಳಶಾಹಿ ವ್ಯವಸ್ಥೆಯ ಇಂದಿನ ಹೊಸರೂಪಗಳಿಗೆ ಅಂದಿನ ಪ್ರಗತಿಶೀಲ ಚಿಂತನೆಗಳು ಹೇಗೆ ಪ್ರಸ್ತುತವಾಗುತ್ತವೆ ಎಂಬ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬಹುದು. ಅಂದಿನ ಕೃತಿಗಳಲ್ಲಿನ ಶೋಷಣೆಯ ಆಂತರಿಕ ರಚನೆಯನ್ನು ಇಂದಿನ

ಮುಕ್ತ ಮಾರುಕಟ್ಟೆ ವ್ಯವಸ್ಥೆಯ ಶೋಷಣೆಯೊಂದಿಗೆ ಹೋಲಿಸಿ ಸಂಶೋಧನೆ ಮಾಡಬಹುದು. ಲಿಖಿತ ಪಠ್ಯ ದೃಶ್ಯ ಪಠ್ಯವಾಗಿ ಬದಲಾಗುವಾಗ ಪ್ರಗತಿಶೀಲ ಸಿದ್ಧಾಂತಗಳು ಹೇಗೆ ಬದಲಾವಣೆಗೊಂಡವು ಎಂಬ ಮಾಧ್ಯಮ ಆಧಾರಿತ ಸಂಶೋಧನೆಗಳನ್ನು ಮಾಡುವ ಅವಕಾಶಗಳಿವೆ.

ಇಂದು ತಾವು ಮಾಡುವ ಮತ್ತು ಇತರರು ಮಾಡುವ ಕೆಲಸಗಳ ಬಗ್ಗೆ ಉತ್ತಮ – ಕನಿಷ್ಠ ಎಂಬ ಭಾವನೆ ಹೊಂದಿದವರಾಗಿದ್ದೇವೆ, ಪೌರಕಾರ್ಮಿಕರ ಕೆಲಸ, ಚಪ್ಪಲಿ ಹೊಲೆಯುವ ಕೆಲಸಗಳು ಉತ್ತಮ ಕೆಲಸಗಳಲ್ಲವೆಂದು ನಂಬಿದ್ದೇವೆ. ಅದೇ ರೀತಿ ನಾವು ಮಾಡುವ ಕೆಲಸಗಳಲ್ಲಿಯೂ ತೃಪ್ತಿ ಇಲ್ಲ ಹಾಗಾಗಿ ಶಿಕ್ಷಕನಿಗೆ ತಮ್ಮ ಮಕ್ಕಳು ಶಿಕ್ಷಕರ ವೃತ್ತಿಗೆ ಬರುವುದು ಇಷ್ಟವಿಲ್ಲ. ರೈತನ ಮಕ್ಕಳು ರೈತನಾಗಬಯಸುವುದು ಇಷ್ಟವಿಲ್ಲ. ಮಾಡುವ ಎಲ್ಲಾ ಕೆಲಸಗಳು ಸಮಾನವಾಗಿದ್ದು ಎಂಬ ಪ್ರಜ್ಞೆಯನ್ನು ಮನುಷ್ಯರಲ್ಲಿ ಒಡಮೂಡಿಸುವ ಪ್ರಯತ್ನ ನಡೆಸಬೇಕಿದೆ. ಭಾರತದ ಗಡಿ ವಿವಾದಕ್ಕೆ ಬಂದರೆ ಇಂದಿನ ಭಾರತದ ಗಡಿಗಳಿಗೂ ಹಿಂದಿನ ಭಾರತದ ಗಡಿಳಿಗೂ ಬಹಳ ವ್ಯತ್ಯಾಸವಿದೆ. ಇಂದಿನ ಆಫ್ಘಾನಿಸ್ತಾನ, ಬಾಂಗ್ಲಾ ದೇಶಗಳು ಭಾರತಕ್ಕೆ ಸೇರಿದ್ದವು. ಇಸ್ಲಾಮಿಕ್ ದಾಳಿಯ ಕಾರಣ ಈ ಎಲ್ಲಾ ಭೂಭಾಗಗಳು ಇಸ್ಲಾಮಿಕ್ ದೇಶಗಳಾಗಿ ಗಡಿ ವಿವಾದಕ್ಕೆ ಎಡೆಯಾಗಿರುವುದನ್ನ ನಾವು ಪ್ರತಿನಿತ್ಯ ಅವಲೋಕಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- *ಪರಂಪರೆ–ಸ್ಮರಣ ಸಂಪುಟ.* (2006). 73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ.
- ಕೃಷ್ಣ ಕುಮಾರ್, ಸಿ.ಪಿ. (2007). *ಸಾಹಿತ್ಯ ಶೀಲನ.* ಕನ್ನಡ ವಿಶ್ವವಿದ್ಯಾಲಯ
- ಶೇಷಗಿರಿರಾವ್, ಎಲ್.ಎಸ್. (2013). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ.
- *ಡಾ.ಜಿ.ಎಸ್.ಎಸ್.–75 (ಗೌರವ ಗ್ರಂಥ).* (2001). ಗೆಳೆಯರ ಬಳಗ.